"ಮಧುರ ಮಕ್ಕಳೇ - ಪರಸ್ಪರ ಒಬ್ಬರಿಗೊಬ್ಬರು ಗೌರವ ಕೊಡಬೇಕು, ತಾವೇ ದೊಡ್ಡವರು ಎ0ದು ತಿಳಿಯಬಾರದು, ನಾನು ಯಾವ ಕರ್ಮ ಮಾಡುತ್ತೇನೆ ಅದನ್ನು ನೋಡಿ ಅನ್ಯರೂ ಮಾಡುತ್ತಾರೆ ಎನ್ನುವುದು ಬುದ್ಧಿಯಲ್ಲಿರಬೇಕು"

ಪ್ರಶ್ನೆ: ಯಾವ ಅವಸ್ಥೆಯನ್ನು ರೂಪಿಸುವುದರಲ್ಲಿ ಬಹಳ ಬಹಳ ಶ್ರಮ ಪಡಬೇಕಾಗುತ್ತದೆ?

ಉತ್ತರ: ಗೃಹಸ್ಥ ವ್ಯವಹಾರದಲ್ಲಿದ್ದು ಸ್ತ್ರೀ ಪುರುಷ ಎನ್ನುವ ಭಾವನೆ ಸಮಾಪ್ತಿ ಆಗಬೇಕು, ಮನಸ್ಸಿನಲ್ಲಿಯೂ ಯಾವ ಸ0ಕಲ್ಪ ವಿಕಲ್ಪಗಳು ನಡೆಯಬಾರದು. ನಾವು ಆತ್ಮಗಳು ಸಹೋದರ-ಸಹೋದರರಾಗಿದ್ದೇವೆ. ಪ್ರಜಾಪಿತ ಬ್ರಹ್ಮನ ಮಕ್ಕಳು ಸಹೋದರ ಸಹೋದರಿ ಆಗಿದ್ದೇವೆ, ಇಂತಹ ಅವಸ್ಥೆಯನ್ನು ಮಾಡಿಕೊಳ್ಳಲು ಸಮಯ ಹಿಡಿಯುತ್ತದೆ. ಜೊತೆಯಲ್ಲಿದ್ದು ವಿಕಾರದ ಬೆ0ಕಿ ಹತ್ತಬಾರದು. ವಿಕಾರಿ ದೃಷ್ಟಿ ಇರಬಾರದು, ಇದರ ಅಭ್ಯಾಸ ಮಾಡಬೇಕು. ಸರ್ವ ಸ0ಬ0ಧಗಳ ಸ್ಯಾಕ್ರೀನ್ ಆಗಿರುವ ಮಾತ ಪಿತರನ್ನು ನೆನಪು ಮಾಡಬೇಕು.

ಗೀತೆ: ಪ್ರಪ0ಚ ಬದಲಾದರೂ ನಾವು ಬದಲಾಗುವುದಿಲ್ಲ......

ಓಂ ಶಾ0ತಿ. ಇದು ಮಕ್ಕಳ ಭರವಸೆ ಮತ್ತು ಪ್ರತಿಜ್ಞೆ ಆಗಿದೆ. ಪ್ರತಿಜ್ಞೆ ಮುಖದಿ0ದ ಹೇಳುವುದಿಲ್ಲ. ಮಕ್ಕಳು ಯಾವಾಗ ತ0ದೆಯನ್ನು ಅರಿತು ಕೊಳ್ಳುತ್ತಾರೆ ಆಗ ಪ್ರತಿಜ್ಞೆ ಆಗಿಯೇ ಬಿಡುತ್ತದೆ. ಪ್ರತಿಯೊಬ್ಬರು ಪದವಿ ಪಡೆಯಲು ಸ್ವತ0ತ್ರವಾಗಿ ಪುರುಷಾರ್ಥ ಮಾಡುತ್ತಾರೆ. ಶಾಲೆಯಲ್ಲಿಯೂ ಉನ್ನತ ಪದವಿ ಪಡೆಯಲು ಎಲ್ಲರೂ ಸ್ವತ0ತ್ರವಾಗಿ ಪುರುಷಾರ್ಥ ಮಾಡುತ್ತಾರೆ. ಇಲ್ಲಿ ಆತ್ಮ ಓದುತ್ತದೆ ಮತ್ತು ಪರಮಾತ್ಮ ಓದಿಸಲು ಜೀವಾತ್ಮ ಆಗುತ್ತಾರೆ. ಮತ್ತು ಬ್ರಹ್ಮಾರವರಲ್ಲಿ ಪ್ರವೇಶ ಆಗಿ ಇವರಿಗೆ (ಬ್ರಹ್ಮಾ) ಮತ್ತು ಬ್ರಹ್ಮಾ ಮುಖವ0ಶಾವಳಿಗಳಿಗೆ ಓದಿಸುತ್ತಾರೆ. ಸ್ವಯಂ ಬ್ರಹ್ಮಾ ಅವರಿಗೆ ಮುಖ ವ0ಶಾವಳಿ ಎ0ದು ಹೇಳುವುದಿಲ್ಲ. ಬ್ರಾಹ್ಮಣರು ಬ್ರಹ್ಮಾ ಮುಖ ವ0ಶಾವಳಿ ಆಗಿದ್ದಾರೆ. ಬ್ರಹ್ಮಾ ಶಿವನ ಮುಖ ವ0ಶಾವಳಿ ಅಲ್ಲ. ತಂದೆ ಇವರಲ್ಲಿ ಪ್ರವೇಶ ಮಾಡಿ ತಮ್ಮವರನ್ನಾಗಿ ಮಾಡಿಕೊಳ್ಳುತ್ತಾರೆ. ಇವರೂ ಸಹ ರಚನೆ ಆಗಿದ್ದಾರೆ. ಮೊದಲು ಬ್ರಹ್ಮಾ ಅವರನ್ನು ರಚನೆ ಮಾಡುತ್ತಾರೆ, ವಿಷ್ಣುವನ್ನು ರಚನೆ ಮಾಡುವುದಿಲ್ಲ. ಬ್ರಹ್ಮಾ, ವಿಷ್ಣು, ಶ0ಕರ ಎನ್ನುವ ಗಾಯನ ಇದೆ. ವಿಷ್ಣು, ಶ0ಕರ ಮತ್ತು ಬ್ರಹ್ಮಾ ಎ0ದು ಹೇಳುವುದಿಲ್ಲ. ಮೊದಲು ಬ್ರಹ್ಮಾರವರನ್ನು ರಚನೆ ಮಾಡುತ್ತಾರೆ. ಬ್ರಹ್ಮಾರವರ ಕರ್ತವ್ಯ ಬೇರೆ ಆಗಿದೆ. ಈ ಒ0ದು ಮಾತು ತಿಳಿದಿಕೊಳ್ಳುವ0ತಹದಾಗಿದೆ. ಇವರಿಗೆ ತ್ವಮೇವ ಮಾತಾಶ್ಚ ಪಿತ. . . ಎ0ದು ಹೇಳಲಾಗುತ್ತದೆ. ಅವರು ನಿರಾಕಾರ ಆಗಿರುವರು ಅಲ್ಲವೆ. ಆದರೆ ಸಾಕಾರದಲ್ಲಿ ಮಾತ-ಪಿತರು ಬೇಕು. ಆಗ ಮಮ್ಮಾರವರಿಗೆ ತಾಯಿ ಇರುತ್ತಾರೆಯೇ? ಎಂದು ಕೇಳುತ್ತಾರೆ. ಹಾ, ಇರುತ್ತಾರೆ. ಬ್ರಹ್ಮಾ ಮಮ್ಮಾರವರಿಗೂ ಸಹ ತಾಯಿ ಆಗಿದ್ದಾರೆ. ಬ್ರಹ್ಮಾರವರಿಗೆ ಯಾವ ತಾಯಿ ಇಲ್ಲ. ಈ ತಾಯಿ (ಬ್ರಹ್ಮಾ) ಸ್ತ್ರೀ ಅಲ್ಲದಿರುವ ಕಾರಣ ಸರಸ್ವತಿಗೆ ತಾಯಿ ಎ0ದು ಹೇಳುತ್ತಾರೆ. ತ0ದೆ ಓದಿಸುತ್ತಾರೆ ಆದ್ದರಿ0ದ ಇವರೂ ಓದುತ್ತಾರೆ. ನೀವು ವಿದ್ಯಾರ್ಥಿ ಇರುವ0ತೆ ಇವರೂ ಇದ್ದಾರೆ. ಶಿವಬಾಬಾ ಏನು ವಿದ್ಯಾರ್ಥಿ ಅಲ್ಲ. ನೀವು ಮಕ್ಕಳು ಬ್ರಹ್ಮಾರವರ ಪದವಿಯನ್ನು ನೋಡುತ್ತಿರುವಿರಿ, ಇವರು ಎಲ್ಲರಿಗಿ0ತ ಹೆಚ್ಚು ಓದುತ್ತಾರೆ. ಇವರು ಬಹಳ ಹತ್ತಿರ ಇರುವುದನ್ನು ನೋಡುತ್ತೀರಿ. ಮೊದಲು ಯಾರ ಕಿವಿಗಳು ಕೇಳುತ್ತವೆ? ಬ್ರಹ್ಮಾ ಎಲ್ಲರಿಗಿ0ತ ಸಮೀಪ ಇದ್ದಾರೆ. ಆಗ ಮಮ್ಮಾ ಬಾಬಾ ಹೆಚ್ಚು ಓದುತ್ತಾರೆ ಎ0ದು ಹೇಳುತ್ತೀರಿ, ನ0ತರ ನ0ಬರ್ವಾರ್ ಎಲ್ಲ ಮಕ್ಕಳೂ ಓದುತ್ತಾರೆ. ಭಲೇ ಮಗ ಜಗದೀಶ ಮಮ್ಮಾ ಬಾಬಾರವರಿಗಿ0ತ ಚೆನ್ನಾಗಿ ತಿಳಿಸಿಕೊಡುತ್ತಾರೆ ಎ0ದು ಬಾಬಾ ಹೇಳುತ್ತಾರೆ. ತಂದೆಯ ಮುರಳಿ ಓದಿ ಧಾರಣೆ ಮಾಡಿ ಗೀತಾ ಪತ್ರಿಕೆ (ಮ್ಯಾಗಜಿನ್) ಇತ್ಯಾದಿ ಮುದ್ರಿಸುತ್ತಾರೆ. ಏಕೆ0ದರೆ ಇವರು ಶಾಸ್ತ್ರ ಇತ್ಯಾದಿ ಓದಿರುವರು. ಇ0ಗ್ಲೀಷನಲ್ಲಿಯೂ ಜಾಣರಾಗಿದ್ದಾರೆ. ಇದಕ್ಕೆ ಹೇಳಲಾಗುತ್ತದೆ ಗೌರವ ಕೊಡುವುದು. ವಿದ್ಯಾರ್ಥಿಗಳು ಪರಸ್ಪರ ಗೌರವ ಕೊಡಬೇಕು. ತಂದೆಯೂ ಸಹ ಗೌರವ ಕೊಡುತ್ತಾರಲ್ಲವೇ. ಅ0ದಮೇಲೆ ತ0ದೆಯನ್ನು ಅನುಸರಿಸಬೇಕು. ಭಲೇ ಇನ್ನೂ 16 ಕಲಾ ಸ0ಪನ್ನರಾಗಿಲ್ಲ. ನ0ಬರ್ವಾರ0ತೂ ಇರುತ್ತಾರಲ್ಲವೇ. ಒ0ದಲ್ಲ ಒ0ದು ತಪ್ಪು ಎಲ್ಲರಿ0ದ ಆಗುತ್ತದೆ. ಆದ್ದರಿ0ದ ತಮ್ಮನ್ನು ತಾವು ಬಹಳ ಜಾಣರೆ0ದು ತಿಳಿಯಬಾರದು. ಎ0ತಹ ಕರ್ಮ ತ0ದೆ ಮಾಡುತ್ತಾರೆ ಅಥವಾ ನಾನು ಮಾಡುತ್ತೇನೆ, ನನ್ನನ್ನು ನೋಡಿ ಅನ್ಯರು ಮಾಡುತ್ತಾರೆ. ಪರಸ್ಪರ ಗೌರವ ಕೊಡಬೇಕು. ತಂದೆಯೂ ಸಹ ಗೌರವ ಕೊಡುತ್ತಾರೆ. ಇವರು ಸ್ತ್ರೀ ಪುರುಷರನ್ನು ಸಹೋದರ ಸಹೋದರಿ ಮಾಡುತ್ತಾರೆ ಎ0ದು ಜನರು ಹೇಳುತ್ತಾರೆ. ಆಗ ಬುದ್ಧಿವ0ತ ಮಕ್ಕಳು ತಕ್ಷಣ ಹೇಳುತ್ತಾರೆ ಎಲ್ಲರೂ ಪರಮಾತ್ಮನ ಮಕ್ಕಳು ಆಗಿದ್ದಾರೆ ಎ0ದಮೇಲೆ ಸಹೋದರ-ಸಹೋದರಿ ಆದರಲ್ಲವೇ. ಪ್ರಜಾಪಿತ ಬ್ರಹ್ಮಾರವರ ಮಕ್ಕಳು ಸಹೋದರ ಸಹೋದರಿ ಆದರಲ್ಲವೇ. ಸಹೋದರ-ಸಹೋದರಿ ಆಗುವುದು ಒಳ್ಳೆಯದಲ್ಲವೇ. ತಂದೆಗೆ ಮಕ್ಕಳಾದರೆ ಆಸ್ತಿ ತೆಗೆದುಕೊಳ್ಳಲು ಸಾಧ್ಯ. ಬ್ರಹ್ಮಾ ತ0ದೆಯ ಮೂಲಕ ಶಿವಬಾಬಾರವರಿ0ದ ಆಸ್ತಿ ಸಿಗುವುದು. ಅ0ದಮೇಲೆ ಬ್ರಹ್ಮಾಕುಮಾರ-ಕುಮಾರಿ ಆಗಬೇಕಾಗುತ್ತದೆ. ನ0ತರ ಎ0ದೂ ವಿಕಾರದಲ್ಲಿ ಹೋಗಲು ಸಾಧ್ಯವಿಲ್ಲ. ಇಲ್ಲದಿದ್ದರೆ ವಿಕರ್ಮ ಆಗುತ್ತದೆ. ತಂದೆಯು ಎಷ್ಟು ಚೆನ್ನಾಗಿ ತಿಳಿಸುತ್ತಾರೆ. ಪವಿತ್ರರಾಗುವ ಯುಕ್ತಿಯನ್ನೂ ತಿಳಿಸುತ್ತಾರೆ. ಸ್ತ್ರೀಯರು ತಂದೆ ಎಂದು ಹೇಳುತ್ತಾರೆ, ಪುರುಷರೂ ಸಹ ತಂದೆ ಎಂದು ಹೇಳುತ್ತಾರೆ. ಆಗ ಸ್ತ್ರೀ ಪುರುಷರ ಭಾವನೆ ಹೋಗಿಬಿಡುತ್ತದೆ. ಆದಮ್ ಬೀಬೀಯರಿ0ದ ಸೃಷ್ಟಿಯ ರಚನೆ ಆಯಿತು ಎ0ದು ಹೇಳುತ್ತಾರೆ ಅ0ದಮೇಲೆ

ಎಲ್ಲರೂ ಅವರ ಸಂತಾನ ಆದರಲ್ಲವೆ. ಸಹೋದರ ಸಹೋದರಿ ಆದರು. ಕುಮಾರ-ಕುಮಾರಿಯರಿಗೆ ಅಷ್ಟು ಪರಿಶ್ರಮ ಮಾಡಬೇಕಾಗಿಲ್ಲ. ಏಣಿಯನ್ನು ಏರಿದವರು ಇಳಿಯಬೇಕಾಗುತ್ತದೆ. ಇಳಿಯುವುದರಲ್ಲಿ ಪರಿಶ್ರಮ ಇದೆ. ಇಬ್ಬರೂ ಬೇರೆ ಬೇರೆ ಇರಬೇಕು ಎಂದಲ್ಲ. ಕೇವಲ ಸಂಗಾತಿಗಳಾಗಿರಬೇಕು. ಸತ್ಯಯುಗದಲ್ಲಿ ಯಾರೂ ಅಪವಿತ್ರ ಆಗುವುದಿಲ್ಲ. ಮತ್ತು ಅಲ್ಲಿ ಮಗುವಿನ ನಿರೀಕ್ಷಣೆಯೂ ಇರುವುದಿಲ್ಲ. ಇಲ್ಲಿ ಮಗುವಿನ ನಿರೀಕ್ಷಣೆ ಇರುತ್ತದೆ. ಅಲ್ಲಿ ಸಮಯಾನುಸಾರ ಸಾಕ್ಷಾತ್ಕಾರ ಆಗುತ್ತದೆ. ಇದು ಹೇಗೆ ಸಾಧ್ಯ ಎಂದು ಮನುಷ್ಯರು ಕೇಳುತ್ತಾರೆ. ಇಲ್ಲಿಯ ಸಂಪೂರ್ಣ ವಿಕಾರಿಗಳು ಅಲ್ಲಿ ನಿರ್ವಿಕಾರಿ ಆಗಿರುತ್ತಾರೆ ಎನ್ನುವುದನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತಾರೆ. ಅಲ್ಲಿ ದೇಹಾಭಿಮಾನ ಇರುವುದಿಲ್ಲ. ಇಲ್ಲಿ ದೇಹಾಭಿಮಾನ ಇರುತ್ತದೆ. ದೇಹ ಬಿಟ್ಟಾಗ ಜನರು ಎಷ್ಟು ಅಳುತ್ತಾರೆ. ಅಲ್ಲಿ ಅಳುವುದು ಇರುವುದಿಲ್ಲ. ಅಲ್ಲಿ ಸಮಯಾನುಸಾರ ಶರೀರ ಬಿಟ್ಟು ಹೋಗಿ ರಾಜಕುಮಾರ ಆಗುತ್ತೇನೆ ಎಂದು ಸಾಕ್ಷಾತ್ಕಾರ ಆಗುತ್ತದೆ. ಇಲ್ಲಿಯೂ ನೀವು ಭವಿಷ್ಯದಲ್ಲಿ ಮಹಾರಾಜಾ-ಮಹಾರಾಣಿ ಆಗುತ್ತೀರಿ ಎಂದು ನಿಮಗೆ ಸಾಕ್ಷಾತ್ಕಾರ ಆಗುತ್ತದೆ. ಕೃಷ್ಣನಂತಹ ಬಾಲಕನನ್ನು ಮಡಿಲಲ್ಲಿ ನೋಡುತ್ತೀರಿ. ಸಾಕ್ಷಾತ್ಕಾರದಿಂದ ಸೂರ್ಯವಂಶದ ಮಹಾರಾಜಾ ಮಹಾರಾಣಿ ಆಗುತ್ತೀರೋ ಅಥವಾ ಚಂದ್ರವಂಶದವರೋ ಗೊತ್ತಾಗುವುದಿಲ್ಲ ಏಕೆಂದರೆ ಇದು ಹೊಸ ಮಾತಾಗಿದೆ. ಆದ್ದರಿಂದ ಮೊದಲು ತಂದೆಯನ್ನು ಅರಿತುಕೊಳ್ಳಿರಿ, ನಾನು ಎಷ್ಟು ಪ್ರಿಯವಾಗಿದ್ದೇನೆ ಎಂದು ತಂದೆ ಹೇಳುತ್ತಾರೆ.

ತಂದೆ ಸರ್ವ ಸಂಬಂಧಗಳ ಸ್ಯಾಕ್ರೀನ್ ನಾನು, ನನ್ನನ್ನು ನೆನಪು ಮಾಡಿರಿ ಎಂದು ಹೇಳುತ್ತೇನೆ. ತ್ವಮೇವ ಮಾತಾಶ್ಚ ಪಿತ- ಎಂದು ಹೇಳುತ್ತಾರೆ, ಒಂದೊಂದು ಮಾತಿನಲ್ಲಿಯೂ ನಿಶ್ಚಯ ಮಾಡಿಸಬೇಕು. ಆದರೂ ಒಂದಲ್ಲ ಒಂದು ಮಾತಿನಲ್ಲಿ ಸಂಶಯ ಬಂದೇ ಬಿಡುತ್ತದೆ. ಆಗ ರಾಜ್ಯ ಪದವಿ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಮನ್ಮನಾಭವ ಎಂದು ತಂದೆ ಹೇಳುತ್ತಾರೆ. ತಂದೆಯನ್ನು ನೆನಪು ಮಾಡಿರಿ, ನೀವು ಪ್ರಿಯತಮೆಯರಾಗಿದ್ದೀರಿ. ಇವರು ಆತ್ಮಿಕ ಪ್ರಿಯತಮ ಪ್ರಿಯತಮೆ. ನಾವು ಆತ್ಮರು ಪರಮಾತ್ಮನ ಪ್ರಿಯತಮೆಯರು ಎನ್ನುವುದನ್ನು ಪಕ್ಕಾ ಮಾಡಿಸಬೇಕು. ಕೃಷ್ಣ ಎಲ್ಲರ ಪ್ರಿಯತಮ ಆಗಲು ಸಾಧ್ಯವಿಲ್ಲ. ಮನ್ಮನಾಭವ ಎಂದು ತಂದೆ ಹೇಳುತ್ತಾರೆ. ಈಗ ನನ್ನ ಬಳಿ ಬರಬೇಕು, ನಾಟಕ ಪೂರ್ಣ ಆಗಲಿದೆ, ಮನೆಗೆ ಹೋಗಬೇಕಾಗಿದೆ. ಅಂದಮೇಲೆ ಮನೆಯನ್ನು ಅವಶ್ಯವಾಗಿ ನೆನಪು ಮಾಡಬೇಕು. ಪ್ರತಿಯೊಂದು ಮಾತಿನ ತಿಳುವಳಿಕೆ ಮುರಳಿಯಲ್ಲಿ ಸಿಗುತ್ತದೆ. ಮಕ್ಕಳು ಮುರಳಿಯನ್ನು ಬರೆದುಕೊಳ್ಳುವುದಿಲ್ಲ ಪುನಃ ಅದೇ ಮಾತನ್ನು ತಂದೆಗೆ ಕೇಳುತ್ತಾರೆ. ಮುಖ್ಯ ಮಾತು ಪ್ರಿಯತಮ ಮತ್ತು ಪ್ರಿಯತಮೆಯರದು. ಎಲ್ಲಾ ಭಕ್ತರೂ ಪ್ರಿಯತಮೆಯರು ಏಕೆಂದರೆ ಪರಮಾತ್ಮನನ್ನು ನೆನಪು ಮಾಡುತ್ತಾರೆ. ನನ್ನವರು ಒಬ್ಬರೇ ಬೇರೆ ಯಾರೂ ಇಲ್ಲ ಎಂದು ಹೇಳುತ್ತಾರೆ. ನೀವು ಮಕ್ಕಳು ಈ ಸಮಯದಲ್ಲಿ ಹೊಸ ಹೊಸ ಮಾತುಗಳನ್ನು ಕೇಳುತ್ತೀರಿ. ಆದರೆ ಕೇಳುತ್ತಾ ಕೇಳುತ್ತಾ ಮಾಯೆ ಏಟು ಕೊಡುತ್ತದೆ. ರಾವಣ ಕಡಿಮೆ ಏನಿಲ್ಲ. ತಂದೆ ಸರ್ವ ಶಕ್ತಿವಂತರು , ಮಾಯೆಯೂ ಸರ್ವಶಕ್ತಿವಂತ ಆಗಿದೆ. ಅರ್ಧ ಕಲ್ಪ ಮಾಯೆಯ ರಾಜ್ಯ ನಡೆಯುತ್ತದೆ. ಐದು ವಿಕಾರಗಳ ದಾನ ಕೊಟ್ಟು ಬಿಡಿ ಆಗ ಗ್ರಹಣ ಬಿಟ್ಟು ಹೋಗುತ್ತದೆ ಎಂದು ತಂದೆ ಈಗ ಹೇಳುತ್ತಾರೆ. ಆದರೂ ಒಂದೇ ಸಮಯದಲ್ಲಿ ಬಿಡುವುದಿಲ್ಲ. ಅನೇಕರು ದಾನ ಕೊಟ್ಟು ಪುನಃ ವಾಪಸ್ ತೆಗೆದುಕೊಳ್ಳುತ್ತಾರೆ. ಇದು ಹಣದ ಮಾತಲ್ಲ, ವಿಕಾರದ ಮಾತಾಗಿದೆ. ಸಾಧು ಸನ್ಯಾಸಿಗಳು ಹೇಳುತ್ತಾರೆ ಧನವನ್ನು ಕೊಟ್ಟು ವಾಪಸ್ ತೆಗೆದುಕೊಳ್ಳಬಾರದು ಎಂದು ಏಕೆಂದರೆ ಇದರಲ್ಲಿ ಅವರ ಸಂಪಾದನೆ ಇದೆ. ಅನೇಕ ಮನುಷ್ಯರು ಸನ್ಯಾಸಿಗಳ ಬಳಿ ಹೋಗಿ ತಮಗೆ ಮಗು ಬೇಕು ಎಂದು ಹೇಳುತ್ತಾರೆ. ನಮ್ಮ ಆಶೀರ್ವಾದದಿಂದ ಆಗುತ್ತದೆ ಎಂದು ಹೇಳುತ್ತಾರೆ. ಮಗು ಆದರೆ ನಾವು ಕೊಟ್ಟೆವು ಎಂದು ಹೇಳುತ್ತಾರೆ. ಸತ್ತರೆ ಆಗುವುದು ಆಯಿತು ಎನ್ನುತ್ತಾರೆ. ಒಬ್ಬರ ಕೆಲಸ ಏನಾದರೂ ಆದರೆ ಅನೇಕರಿಗೆ ವಿಶ್ವಾಸ ಆಗಿಬಿಡುತ್ತದೆ. ಈ ರೀತಿ ಅವರ ವೃದ್ಧಿ ಆಗುತ್ತದೆ. ಒಂದು ಕಡೆ ತಮ್ಮ ಮಹಿಮೆ ಮಾಡಿಕೊಳ್ಳುತ್ತಾರೆ ಮತ್ತೊಂದು ಕಡೆ ಆಗುವುದು ಆಗುತ್ತದೆ ಎನ್ನುತ್ತಾರೆ. ನೀವು ಈ ಸಮಯದಲ್ಲಿ ಗುಪ್ತ ಯೋಧರಾಗಿದ್ದೀರಿ. ಅರೆ ಯಾರ ಬಗ್ಗೆ ಗೊತ್ತೇ ಇಲ್ಲ ಅವರ ನೆನಪಾರ್ಥ ಹೇಗೆ ಮಾಡಲು ಸಾಧ್ಯ. ಈಗ ನೀವು ಗುಪ್ತ ಆಗಿರುವಿರಿ ಮುಂದೆ ನೀವು ಪ್ರಸಿದ್ಧ ಆಗುತ್ತೀರಿ. ನಿಮ್ಮ ಮಂದಿರಗಳು ತಯಾರ ಆಗುತ್ತವೆ. ಈಗ ನೀವು ಗುಪ್ತವಾಗಿಯೇ ರಾಮರಾಜ್ಯ ಸ್ಥಾಪನೆ ಮಾಡುತ್ತಿರುವಿರಿ. ಒಳ್ಳೆಯದು.

ಮಧುರಾತಿ ಮಧುರ ಮಕ್ಕಳು - ಬಹಳ ಕಾಲದಿಂದ ಅಗಲಿ ಸಿಕ್ಕಿರುವವರು ಅಲ್ಲವೆ! 5 ಸಾವಿರ ವರ್ಷಗಳ ನಂತರ ಸಿಕ್ಕಿರುವಿರಿ. ಕಳೆದು ಹೋದ ಮಕ್ಕಳು ಸಿಕ್ಕರೆ ತಂದೆ ತಾಯಿಗೆ ಎಷ್ಟು ಖುಷಿ ಆಗುತ್ತದೆ, ಮಗು ಸಹ ಬಾಬಾ ಬಾಬಾ ಎಂದು ಹೇಳುತ್ತದೆ. ವಿನಾಶ ಆಗುತ್ತದೆ ಆಗ ನೀವು ಕಳೆದು ಹೋಗುತ್ತೀರಿ ಅರ್ಥಾತ್ ತಂದೆಯಿಂದ ಅಗಲುತ್ತೀರಿ. ಪುನಃ ಕಲ್ಪದ ನಂತರ ತಂದೆಯ ಜೊತೆ ಮಿಲನ ಮಾಡುತ್ತೀರಿ ಆಗ ತಂದೆಯ ಪ್ರೀತಿ ಎಷ್ಟೊಂದು ಸಿಗುತ್ತದೆ. ಅರ್ಧ ಕಲ್ಪ ನೀವು ಸುಖ ಭೋಗಿಸುತ್ತೀರಿ ನಂತರ ದುಃಖಿ ಆಗುತ್ತೀರಿ. ಸನ್ಯಾಸಿಗಳು ಹೇಳುತ್ತಾರಲ್ಲವೆ ಸುಖ ಕಾಗ ವಿಷ್ಟ ಸಮಾನವಾಗಿದೆ. ಅವರೂ ಸಹ ವಿಕಾರಕ್ಕೆ ಹೇಳುತ್ತಾರೆ. ಗುರು ನಾನಕರು ಹೊಲಸಾದ ಬಟ್ಟೆಯನ್ನು ಒಗೆದರು ಎಂದು ಹೇಳಿದ್ದಾರೆ. ಯಾರು ಒಗೆಯುತ್ತಾರೆ! ಒಬ್ಬ ಪರಮಾತ್ಮ ಮಾತ್ರ ಆಗಿದ್ದಾರೆ ಅವರಿಗೆ ಏಕ್ ಓಂಕಾರ್ ಎಂದು ಹೇಳುತ್ತಾರೆ, ಸಿಖ್ಖರು ಹಾಡುತ್ತಾರೆ. ಈ ಜ್ಞಾನದಲ್ಲಿ ನೀವು ಮಕ್ಕಳ ಬುದ್ಧಿ ಬಹಳ ತೀಕ್ಷ್ಣವಾಗಿರಬೇಕು ಏಕೆಂದರೆ ಆತ್ಮವನ್ನು ಎಚ್ಚರಿಸಬೇಕಾಗಿದೆ. ಮಾತೆಯರು, ಕನ್ಯೆಯರು ಬಹಳ ಚೆನ್ನಾಗಿ ತಯಾರ ಆಗುತ್ತಾರೆ. ಮಾತೆಯರು ಪತಿಗೆ ತಿಳಿಸುವುದರಲ್ಲಿ ಬಹಳ ಸಾಹಸ ಮತ್ತು ನಿರ್ಭಯತೆ ಬೇಕು. ಇನ್ನುಳಿದವರು ಎಲ್ಲರೂ ನರಕವಾಸಿಗಳಾಗಿದ್ದಾರೆ, ದುರ್ಗತಿಯಲ್ಲಿದ್ದಾರೆ. ಅವರಂತೂ ಭಕ್ತಿಯಲ್ಲಿ ಬಹಳ ಕುಣಿಯುವುದು ಚಪ್ಪಾಳೆ ತಟ್ಟುವುದು ಇತ್ಯಾದಿ ಮಾಡುತ್ತಾರೆ, ಸದ್ಗತಿ ಆಗುವುದಿಲ್ಲ. ನೀವು ಮಕ್ಕಳು ಸದ್ಗತಿಯಲ್ಲಿ ಹೋಗಲು ಪೂರ್ಣವಾಗಿ ಸುಮ್ಮನಿರುತ್ತೀರಿ. ನಾರದ ನಾನು

ಲಕ್ಷ್ಮೀಯನ್ನು ವರಿಸುತ್ತೇನೆ ಎ0ದು ಹೇಳಿದ. ವಾಸ್ತವದಲ್ಲಿ ಲಕ್ಷ್ಮೀಯನ್ನು ವರಿಸಲು ಪುರುಷಾರ್ಥ ಮಾಡುತ್ತಿರುವಿರಿ. ಭಕ್ತರು ವರಿಸಲು ಸಾಧ್ಯವಿಲ್ಲ. ಲಕ್ಷ್ಮೀ ನಾರಾಯಣರಿಗೆ ರಾಜ್ಯ ಹೇಗೆ ಸಿಕ್ಕಿತು, ಯಾವಾಗ ಸಿಕ್ಕಿತು ಮತ್ತು ಅವರು ಈಗ ಎಲ್ಲಿದ್ದಾರೆ ಎನ್ನುವುದು ನಿಮಗೆ ಮಾತ್ರ ಗೊತ್ತಿದೆ. ಆದರಿ0ದ ನೀವು ಮ0ದಿರಗಳಿಗೆ ಹೋಗಿ ತಲೆ ಬಾಗುವುದಿಲ್ಲ. ನಾವೇ ಲಕ್ಷ್ಮೀ ನಾರಾಯಣ ಆಗುತ್ತಿದ್ದೇವೆ ಎ0ದು ತಿಳಿದುಕೊ0ಡಿದ್ದೀರಿ. ನೀವು ತಲೆ ಬಾಗುವುದು ಮುಗಿದಿದೆ. ಇವರು ನಾಸ್ತಿಕರು ನಮಸ್ಕಾರ ಮಾಡುವುದಿಲ್ಲ ಎ0ದು ಅವರು ಹೇಳುತ್ತಾರೆ. ವಾಸ್ತವದಲ್ಲಿ ನೀವೇ ಆಸ್ತಿಕರಾಗಿರುವಿರಿ - ನ0ಬರ್ವಾರ್ ಪುರುಷಾರ್ಥದನುಸಾರ. ಅವರು ನಾಸ್ತಿಕರು ಪರಮಾತ್ಮನನ್ನು ತಿಳಿದುಕೊ0ಡಿಲ್ಲ. ಈಗ ನೀವು ಧಣಿಯ ಮಕ್ಕಳಾಗಿದ್ದೀರಿ ಆದರೂ ಮಾಯೆ ಏಟು ಕೊಟ್ಟು ಅನಾಥ, ನಿರ್ಧನಿಕರನ್ನಾಗಿ ಮಾಡುತ್ತದೆ. ವಯಸ್ಸಾದವರನ್ನೂ ಸಹ ಮಾಯೆ ಯುವಕರನ್ನಾಗಿ ಮಾಡುತ್ತದೆ. ಮಾಯೆಯ ಬಿರುಗಾಳಿ ಬರುತ್ತದೆ. ನೀವು ಪರಸ್ಪರರ ಕೈ ಹಿಡಿದು, ಸಹಯೋಗಿ ಆಗಿ ಈ ಹೊಸ ಯಾತ್ರೆಯಲ್ಲಿ, ತ0ದೆಯ ಶ್ರೀಮತದನುಸಾರ ನಡೆಯುತ್ತಾ ಹೋಗಬೇಕು. ಎಲ್ಲವೂ ಬುದ್ಧಿಯ ಯಾತ್ರೆಯನ್ನು ಅವಲ0ಬಿಸಿದೆ. ಆಚಲ-ಅಡೋಲ ಅ0ಗದನ ಸಮಾನ ಆಗಬೇಕು. ಅ0ತ್ಯದಲ್ಲಿ ಆ ಅವಸ್ಥೆ ಬರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿಂಗ್. ಆತ್ಮಿಕ ತ0ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗೆ ಮುಖ್ಯಸಾರ:

1. ಪರಸ್ಪರರ ಕೈ ಹಿಡಿದು, ಸಹಯೋಗಿ ಆಗಿ ತ0ದೆಯ ಶ್ರೀಮತದನುಸಾರ ನಡೆಯುತ್ತಾ ಹೋಗಬೇಕು. ತ0ದೆ ಸರ್ವ ಸ0ಬ0ಧಗಳ ಸ್ಯಾಕ್ರೀನ್ ಆಗಿದ್ದಾರೆ ಅವರನ್ನು ಬಹಳ ಪ್ರೀತಿಯಿ0ದ ನೆನಪು ಮಾಡಬೇಕು.

2. ಯಾವ ರೀತಿ ತ0ದೆ ಪ್ರತಿ ಮಗುವಿಗೆ ಗೌರವ ಕೊಡುತ್ತಾರೆ, ಅದೇ ರೀತಿ ತ0ದೆಯನ್ನು ಅನುಸರಿಸಬೇಕು. ದೊಡ್ಡವರಿಗೆ ಅವಶ್ಯ ಗೌರವ ಕೊಡಬೇಕು.

**ವರದಾನ:** "ನತಿಂಗ್ ನ್ಯೂ" (ಇದೇನು ಹೊಸದಲ್ಲ) ಎನ್ನುವ ಪಾಠದ ಮೂಲಕ ವಿಘ್ನಗಳನ್ನು ಆಟವೆಂದು ತಿಳಿದು ಪಾರು ಮಾಡುವಂತಹ ಅನುಭವಿ ಮೂರ್ತಿ ಭವ.

ವಿಘ್ನಗಳನ್ನು ನೋಡಿ ಗಾಬರಿಯಾಗಬೇಡಿ. ಮೂರ್ತಿ ತಯಾರಾಗುವಾಗ ಸ್ವಲ್ಪ ಸುತ್ತಿಗೆಯ ಏಟು ಬಿದ್ದೇ ಬೀಳುತ್ತದೆ. ಸುತ್ತಿಗೆಯಿಂದಲೇ ಕೆತ್ತಿ-ಕೆತ್ತಿ ಸರಿಮಾಡಲಾಗುವುದು. ಆದ್ದರಿಂದ ಎಷ್ಟು ಮುಂದೆ ಹೋಗುವಿರಿ ಅಷ್ಟು ಹೆಚ್ಚು ಬಿರುಗಾಳಿಯನ್ನು ಎದುರಿಸಬೇಕಾಗುವುದು. ಆದರೆ ನಿಮಗಾಗಿ ಈ ಬಿರುಗಾಳಿ ನಿಮ್ಮನ್ನು ಅನುಭವಿ ಮಾಡಲು ಒಂದು ಬಳುವಳಿಯಾಗಿದೆ, ಆದ್ದರಿಂದ ಈ ರೀತಿ ಯೋಚಿಸಬೇಡಿ ಎಲ್ಲಾ ವಿಘ್ನಗಳ ಅನುಭವ ನನ್ನ ಬಳಿಯೇ ಬರಬೇಕೆ ಎಂದಲ್ಲ. ಸ್ವಾಗತ ಮಾಡಿ-ಬನ್ನಿ. ನತಿಂಗ್ ನ್ಯೂನ ಪಾಠ ಪಕ್ಕಾ ಮಾಡಿಕೊಳ್ಳಿ ಆಗ ಈ ವಿಘ್ನ ಆಟವೆನಿಸುತ್ತದೆ.

**ಸ್ಲೋಗನ್:** ಸತ್ಯತೆಯ ವಿಶೇಷತೆ ಇದ್ದಲ್ಲಿ ಆತ್ಮರೂಪಿ ವಜ್ರದ ಹೊಳಪು ನಾಲ್ಕೂ ಕಡೆ ಸ್ವತಃವಾಗಿ ಹರಡುವುದು.